

ಚಾಮುಂಡಿ ಬೆಟ್ಟದ ಮೇಲಿನ ಲಲಿತಾದ್ರಿ ಅರಮನೆಯ ಒಂದು ನೋಟ

ಮಹಡಿಗಳ ಕಟ್ಟಡ ನಿರ್ಮಾಣ ಮಾಡಿ 116 ಅಂಗಡಿ ಮಳಿಗೆಗಳಿಗೆ ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ. ಈಗಾಗಲೇ ಕಟ್ಟಡ ನಿರ್ಮಿಸುವ ಕೆಲಸಕ್ಕೂ ಚಾಲನೆ ಸಿಕ್ಕಿದೆ. ತಳ ಮಹಡಿಯಲ್ಲಿ ಅಂಗಡಿ ಮಾಲೀಕರ ವಾಹನಗಳ ನಿಲುಗಡೆ ಹಾಗೂ ಶೌಚಾಲಯ ವ್ಯವಸ್ಥೆ ಇರಲಿದೆ.

ಮೈಸೂರು ಭಾಗದ ವಿಶೇಷಗಳ ಪೇಂಟಿಂಗ್ಸ್, ಕಲಾಕೃತಿಗಳು, ಕೆತ್ತನೆ ವಸ್ತುಗಳು, ಇತರ ಅಲಂಕಾರಿಕ ಹಾಗೂ ಸ್ಥಳೀಯ ವಿಶೇಷವಿರುವ ಉತ್ಪನ್ನಗಳನ್ನು ದಾಸ್ತಾನು ಮಾಡಿ ಮಾರಾಟ ಮಾಡಲು ಸುಸಜ್ಜಿತ ಕಟ್ಟಡ ಬೇಕಾಗುತ್ತದೆ. ಮಾರುಕಟ್ಟೆಯ ರೂಪ ನೀಡಿದರೆ ದೇಶ, ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಮೈಸೂರಿನ ಕಲೆಯನ್ನೂ ಪರಿಚಯಿಸಬಹುದು. ಪ್ರವಾಸೋದ್ಯಮಕ್ಕೆ ಪೂರಕವಾದ ಚಟುವಟಿಕೆಗಳ ಹೆಚ್ಚಳದಿಂದಾಗಿ ಚಾಮುಂಡಿ ಬೆಟ್ಟವೂ ಮತ್ತಷ್ಟು ಪ್ರವಾಸಿಗರನ್ನು ಸೆಳೆಯುತ್ತದೆ ಎನ್ನುವುದು ಸರ್ಕಾರದ ಲೆಕ್ಕಾಚಾರ.

ಈ ಹಿನ್ನೆಲೆಯಲ್ಲೇ ಬೆಟ್ಟದ ನಿಲ್ದಾಣದಲ್ಲಿ ಬಸ್ ಇಳಿದು ಬರುವ ಭಕ್ತಾದಿಗಳಿಗೆ 485 ಮೀಟರ್ ಉದ್ದದ ಸರತಿ ಸಾಲಿನ ಶೆಲ್ಟರ್ ನಿರ್ಮಿಸುವ ಕಾಮಗಾರಿಗೂ ಚಾಲನೆ ದೊರೆತಿದೆ. ಈ ಹಾದಿಯಲ್ಲಿ ಕುಳಿತುಕೊಳ್ಳಲು ಆಸನ ವ್ಯವಸ್ಥೆ ಇರಲಿದ್ದು, ಎರಡು ಶೌಚಾಲಯಗಳನ್ನೂ ನಿರ್ಮಿಸಲಾಗುತ್ತಿದೆ.

ಪ್ರತಿ ದಿನವೂ ಸಾಕಷ್ಟು ಸಂಖ್ಯೆಯ ವಾಹನಗಳು ಬೆಟ್ಟವೇರುತ್ತಿವೆ. ಕೆಲವೆಡೆ ರಸ್ತೆಗಳು ಕಿರಿದಾಗಿದ್ದು, ಕಡಿದಾದ ತಿರುವುಗಳಿವೆ. ಆಗಾಗ ಅಪಘಾತ ಸಾಮಾನ್ಯ ಎನ್ನುವಂತಾಗಿದೆ. ವಾಹನ ದಟ್ಟಣೆಯನ್ನು ಗಮನಿಸಿದ ಸರ್ಕಾರ ಬೆಟ್ಟದ ಮೇಲೆ ತೆರಳಲು ಚತುಷ್ಪಥ ರಸ್ತೆ ನಿರ್ಮಿಸುವ ಪ್ರಸ್ತಾವ ಮುಂದಿಟ್ಟಿದೆ. ಇದರಿಂದ ಅಪಘಾತಗಳ ಸಂಖ್ಯೆಯನ್ನು ಕಡಿಮೆ ಮಾಡಿ, ಸಾವು–ನೋವು ತಡೆಯಬಹುದು. ಪ್ರವಾಸಿಗರು, ಪ್ರವಾಸೋದ್ಯಮ ಬೆಳವಣಿಗೆ ಹಿತದೃಷ್ಟಿಯಿಂದ ರಸ್ತೆ ವಿಸ್ತರಣೆ ಅಗತ್ಯ ಎಂದು ಹೇಳಲಾಗುತ್ತಿದೆ.

ಆಧುನೀಕರಣದ ಯಾವುದೇ ಯೋಜನೆ ಇದ್ದರೂ ಇವತ್ತು ಪರಿಸರಪ್ರೇಮಿಗಳ ವಿರೋಧ ಕೇಳಿಸುವುದು ಸಹಜ. ಪರಿಸರಪ್ರೇಮಿಗಳು ಇಲ್ಲವಾದಲ್ಲಿ ಅಭಿವೃದ್ಧಿಯ ದೈತ್ಯ ಯಂತ್ರ ಲಂಗುಲಗಾಮಿಲ್ಲದೆ ಎಲ್ಲವನ್ನೂ ನಾಶ ಪಡಿಸುವುದೂ ನಿಜ. ಚಾಮುಂಡಿ ಬೆಟ್ಟದ ಅಭಿವೃದ್ಧಿ ಕೆಲಸಗಳಿಗೆ ಸಂಬಂಧಿಸಿಯೂ ಈಗ ವಿರೋಧ ವ್ಯಕ್ತವಾಗಿದೆ. ಈ ವಿರೋಧದಲ್ಲೂ ಎರಡು ಬಗೆ. ಒಂದು ಪರಿಸರದ ನಾಶ ಆಗದಂತೆ ತಡೆಯುವ ಧ್ವನಿ. ಇನ್ನೊಂದು ಆಸ್ತಿಕರ ಶ್ರದ್ಧಾಭಕ್ತಿ ಕೇಂದ್ರವಾಗಿರುವ ಚಾಮುಂಡಿ ಬೆಟ್ಟ ವಾಣಿಜ್ಯ ಉದ್ದೇಶದ ಪ್ರವಾಸಿ ಕೇಂದ್ರವಾಗಿ ಬದಲಾಗುವುದು ಸಾಧುವೆ.. ಎನ್ನುವ ಪ್ರಶ್ನೆ.

## ಅಭಿವೃದ್ಧಿಯೇ ಬೇಡ

'ಮೈಸೂರಿಗೆ ಕಳಶಪ್ರಾಯದಂತಿರುವ ಚಾಮುಂಡಿ ಬೆಟ್ಟದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಬೇಡವೇ ಬೇಡ' ಎಂದು ಪರಿಸರವಾದಿಗಳು ಬಿಗಿಪಟ್ಟು ಹಿಡಿದಿದ್ದಾರೆ. ಕಟ್ಟಡ ನಿರ್ಮಾಣದಂತಹ ಚಟುವಟಿಕೆಗಳು ನಡೆಯಲೇ ಬಾರದು ಎನ್ನುತ್ತಿದ್ದಾರೆ. ಬೆಟ್ಟದ ಮೇಲೆ ಅಪಾರ ಜೀವವೈವಿಧ್ಯವಿದ್ದು, ಸೂಕ್ಷ್ಮ ಪರಿಸರ ತಾಣವಾಗಿದೆ. ಅಪರೂಪದ, ನಶಿಸುತ್ತಿರುವ ಜೀವ ವೈವಿಧ್ಯವನ್ನು ತನ್ನ ಒಡಲಲ್ಲಿ ಸಂರಕ್ಷಿಸಿಕೊಂಡು ಬಂದಿದೆ. ಈಗ ಅದನ್ನು ಉಳಿಸುವ ಕೆಲಸ ಮಾಡಬೇಕಾಗಿದೆ. ಅಪಾರ ಸಸ್ಯ ಸಂಪತ್ತು, ಅಪರೂಪದ ವನ್ಯ ಸಂಕುಲ, ಕಣ್ಮರೆಯಾಗುತ್ತಿರುವ ವಿಶೇಷ ಸೂಕ್ಷ್ಮ ಜೀವಿಗಳಿವೆ. ಇವೆಲ್ಲವೂ ಉಳಿಯಬೇಕಾದರೆ ಚಾಮುಂಡಿ ಬೆಟ್ಟದಲ್ಲಿ ಒಂದು ಸಣ್ಣ ಕಲ್ಲೂ ಅಲುಗಾಡಬಾರದು. ರಸ್ತೆ ವಿಸ್ತರಣೆಯಂತೂ ನಡೆಯಲೇ ಬಾರದು ಎಂದು ಒತ್ತಾಯಿಸಿ ಈಗಾಗಲೆ ಹೋರಾಟಗಳು ರೂಪುಗೊಂಡಿವೆ.

ಮೈಸೂರಿನಲ್ಲಿ ಜನಸಂಖ್ಯೆ ಹೆಚ್ಚುತ್ತಿದ್ದು, ವಾಹನ ದಟ್ಟಣೆಯಿಂದಾಗಿ ಪರಿಸರ ಮಾಲಿನ್ಯಗೊಂಡಿದೆ. ಅಭಿವೃದ್ಧಿ ಕೆಲಸಗಳು ನಡೆದು ಸೌಕರ್ಯಗಳು